

# ಚಿತ್ರಕಲೆಗೆ ಮೃದಂಗ ಸಾಥ್!

(43ನೇ ಪುಟದಿಂದ..)

ರಘುರಾಮ್ ಅವರು ಹಾಡುಗಾರಿಕೆ, ಪಿಟೀಲಿನಲ್ಲಿ ಪರಿಣತರು; ಮೋಹನ್ ಅವರು ಚಿತ್ರಕಲೆ, ಮೃದಂಗದಲ್ಲಿ ವಿದ್ವಾಂಸರು. ಹೀಗಾಗಿ ಇಬ್ಬರೂ ಸೇರಿ ಸಂಗೀತ ಕಲಾ ಶಾಲೆ ನಡೆಸಲಾರಂಭಿಸಿದರು. ಬೆಂಗಳೂರು ಮತ್ತು ಇತರ ಕಡೆಗಳಲ್ಲಿ ಸಂಗೀತ ಕಛೇರಿ ನೀಡುತ್ತಾ ಬಂದರು. ಉತ್ತಮ ಹೆಸರು ಪಡೆದರು. 'ಕಲೆಯನ್ನು ವ್ಯಾಪಾರ ಮಾಡಬೇಡಿ' ಎಂದು ತಂದೆಯವರು ಹೇಳಿದ ಕಿವಿಮಾತನ್ನು ಚಾಚೂ ತಪ್ಪದೆ ಪಾಲಿಸುತ್ತಾ ಬಂದರು.

ಮೋಹನ್ ಅವರದು ಮೃದಂಗ ವಾದನದ ಶೈಲಿ ಅತ್ಯಂತ ವಿಶಿಷ್ಟವಾದದ್ದು. ವಿಭಿನ್ನ ಶೈಲಿ, ಆಕರ್ಷಕ ನುಡಿಸಾಣಿಕೆಗೆ ಹೆಸರಾದ ಮೋಹನ್ ಒಬ್ಬ ಉತ್ತಮ ಕಲಾ ಸಾಧಕ.

## ದೇಶದ ನಾನಾ ಭಾಗದಲ್ಲಿ ಪ್ರದರ್ಶನ

ಮೋಹನ್ ಅವರು ಚಿತ್ರಕಲೆಯ ಪ್ರದರ್ಶನವನ್ನು ದೇಶದ ನಾನಾ ಭಾಗಗಳಲ್ಲಿ ನಡೆಸಿದ್ದಾರೆ. ಲಲಿತ ಕಲಾ ಅಕಾಡೆಮಿಯಿಂದ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ಉತ್ತಮ ತೈಲ ಚಿತ್ರ, ಪ್ರಕೃತಿ ಚಿತ್ರ ಎಂಬ ಹೆಗ್ಗಳಿಕೆಯೂ ಇವರ ಬೆನ್ನಿಗಿದೆ. ಕಲೆಯಲ್ಲಿ ವ್ಯಾಪಾರೀಕರಣ ತರದೆ ಶುದ್ಧ ಮನಸ್ಸು, ಪ್ರಾಂಜಲ ಹೃದಯದಿಂದ ಕಲಾ ಸೇವೆ ಮಾಡಿದರು. ಪ್ರಾಮಾಣಿಕವಾಗಿ ಅನೇಕ ಕಲಾಸಕ್ತರನ್ನು ಬೆಳೆಸಿದರು. 35 ವರ್ಷಗಳ ಸುದೀರ್ಘ ಕಲಾ ಸೇವೆಯಲ್ಲಿ ನಿರತರಾದರು. ಮಕ್ಕಳನ್ನು ಹುರಿದುಂಬಿಸಿದರು.

'ಚಿತ್ರಕಲೆಯಲ್ಲಿ ಎಲ್ಲ ಪ್ರಕಾರದ ಚಿತ್ರಗಳನ್ನೂ ಮಾಡುತ್ತೇನೆ. ಮುಖ್ಯವಾಗಿ 'ದಸರಾ', ಮೈಸೂರು ದಸರಾ ಚಿತ್ರವನ್ನು ಆಗಿನ ಕಾಲದ ವೈಭವದಂತೆ ಮಾಡಿದ್ದೇನೆ. ಇದು ಬಹಳ ಮೆಚ್ಚುಗೆ ಪಡೆದಿದೆ. ಇವು ಅಮೆರಿಕ, ಸ್ವೀಡನ್, ಸ್ವಿಡ್ಜರ್ಲೆಂಡ್ ಮುಂತಾದ ಕಡೆ ಜನ ಖರೀದಿಸಿದ್ದಾರೆ. ಭಾರತದಲ್ಲೂ ಹಲವೆಡೆ ಚಿತ್ರಗಳನ್ನು ಕೊಂಡುಕೊಂಡಿದ್ದಾರೆ' ಎನ್ನುತ್ತಾರೆ ವಿದ್ವಾನ್ ಮೋಹನ್.

ಇವರು ರಚಿಸಿದ ಸೋದೆ ಮಠದ ಹಿಂದಿನ ಶ್ರೀ ವಿಶ್ವೋತ್ತಮ ತೀರ್ಥ ಶ್ರೀಪಾದರು ಕನಸಿನಲ್ಲಿ ಕಂಡ ಗಂಗಾವತರಣ ದೃಶ್ಯ ಅಮೋಘವಾಗಿದೆ. ಇವರ ಎರಡು ಚಿತ್ರಗಳು ಸೋಂದೆ ಮಠದ ಗೋಡೆ ಮೇಲೆ ಅಲಂಕೃತವಾಗಿವೆ. ಇವರು ರಚಿಸಿದ ದಸರಾ ಚಿತ್ರ ಸರಣಿಯ ಒಂದೊಂದು ಚಿತ್ರಕಲೆಯೂ ಬಹಳ ಬೆಲೆ ಬಾಳುವಂಥದ್ದು. ಇದು ಅಮೆರಿಕ, ಸ್ವಿಡ್ಜರ್ಲೆಂಡ್‌ವರೆಗೂ ಹೋಗಿದೆ. ಒಂದು ಲಕ್ಷ ರೂಪಾಯಿಗೂ ಹೆಚ್ಚು ಬೆಲೆ ಸಿಕ್ಕಿದೆ.



ಕುಂಚದಲ್ಲಿ ಮೂಡಿದ ಗಂಗಾವತರಣದ ದೃಶ್ಯ..

ಇವರ ಮಕ್ಕಳಾದ ವಿನಯ್, ಸುಚಿತ್ರಾ ಕೂಡ ಕಲಾ ಕ್ಷೇತ್ರದಲ್ಲಿ ಹೆಸರು ಮಾಡಿದವರು. ಇವರ ಮನೆಯೇ ಒಂದು ಮ್ಯೂಸಿಯಂನಂತಿದೆ. ಮನೆಯಲ್ಲಿ ಚಿತ್ರಕಲೆ, ಸಂಗೀತ, ಮೃದಂಗ ಮೇಳೈಸಿ ಕಲಾ ಸಂಗಮ ಕಣ್ಣಿಗೆ ಹಬ್ಬ ನೀಡುತ್ತದೆ. ಸದ್ಯ ತ್ಯಾಗರಾಜನಗರದಲ್ಲಿ ಮೃದಂಗ ಕ್ಲಾಸ್ ನಡೆಸು ತ್ತಾರೆ. 10 ಮಕ್ಕಳು ಇಲ್ಲಿ ಮೃದಂಗ ಕಲಿಯುತ್ತಾರೆ. ಏಳೆಂಟು ಮಕ್ಕಳು ಚಿತ್ರಕಲೆ ಕ್ಲಾಸ್‌ಗೆ ಬರುತ್ತಾರೆ. ಚಿತ್ರಕಲೆ, ಸಂಗೀತದಲ್ಲಿ ಪಾಂಡಿತ್ಯ ಸಾಧಿಸಿದ್ದರೂ ಮೋಹನ್ ಅಮ್ಮಣ್ಣಾಯ ಪ್ರಚಾರ ಬಯಸದೆ ತೆರೆಮರೆಯಲ್ಲೇ ಉಳಿದು ಬಿಟ್ಟಿದ್ದಾರೆ.

ಮೋಹನ್ ಅಮ್ಮಣ್ಣಾಯ ಅವರ ಸಂಪರ್ಕಕ್ಕೆ 9449458780